


# ಕೃಷಿ ಹಾಗೂ ಕೃಷಿಯೇತರ ವಲಯಗಳ ಸಂಪರ್ಕ ಹಾಗೂ ಗ್ರಾಮೀಣಾಭಿವೃದ್ಧಿಯಲ್ಲಿ ಕೃಷಿಯೇತರ ವಲಯದ ಪಾತ್ರ

ಮೀನಾಕ್ಷಿ ರಾಜೀವ್ ಮತ್ತು ಮನೋಜಿತ್ ಭಟ್ಟಾಚಾರ್ಜಿ[೧]




## ಪೀಠಿಕೆ

ಗ್ರಾಮೀಣ ಕೃಷಿಯೇತರ ವಲಯವು (ಆರ್‌ಎನ್‌ಎಫ್‌ಎಸ್) ಗ್ರಾಮೀಣ ಪ್ರದೇಶಗಳಲ್ಲಿ ಹಲವಾರು ಆರ್ಥಿಕ ಚಟುವಟಿಕೆಗಳನ್ನು ಒಳಗೊಂಡಿದ್ದು, ಕೃಷಿ ಹಿಡುವಳಿಗಳನ್ನು ಹೊರತುಪಡಿಸಿ ಉಳಿದೆಲ್ಲಾ ಗ್ರಾಮೀಣ ಉತ್ಪಾದನಾ ಚಟುವಟಿಕೆಗಳನ್ನು ತನ್ನ ವಲಯದಲ್ಲಿ ಸೇರಿಸಿಕೊಂಡಿದೆ. ಈ ವಲಯವು ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಸಮಗ್ರ ಹಾಗೂ ಸೇರ್ಪಡೆ ಅಭಿವೃದ್ಧಿಯನ್ನು ಸಾಧಿಸುವ ಕಾರ್ಯದ ಸಾರಥ್ಯ ವಹಿಸಲು ಸಮರ್ಥವಾಗಿದೆ. ಇದು ಹೇಗೆಂದರೆ, ಗ್ರಾಮೀಣ ಕಾರ್ಮಿಕರ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಮೂಲಕ ಹಾಗೂ ಅವರ ವೇತನವನ್ನು ಅಧಿಕಗೊಳಿಸುವ ಮೂಲಕ ಆದಾಯದ ಅಸಮಾನತೆಯನ್ನು ಆರ್‌ಎನ್‌ಎಫ್‌ಎಸ್ ಹೋಗಲಾಡಿಸುತ್ತದೆ. ಗ್ರಾಮೀಣ ಕೃಷಿಯೇತರ ವಲಯವು ಚೆನ್ನಾಗಿ ಕೆಲಸ ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಅದು ಕೃಷಿ ಆದಾಯದ ಏರಿಳಿತಗಳನ್ನು ಸರಿದೂಗಿಸುವ ಒಂದು ಪೂರಕ ಶಕ್ತಿಯಾಗಿ ಪರಿಣಮಿಸುತ್ತದೆ. ಹವಾಮಾನ ವೈಪರೀತ್ಯದಿಂದ ಹಿಡಿದು ಅಗತ್ಯ ಪ್ರಮಾಣದ ಸಾಲ ದೊರಕದೆ ಇರುವ ತನಕ ಅನೇಕ ಅಂಶಗಳ ಕಾರಣವಾಗಿ ಗ್ರಾಮೀಣ ಕುಟುಂಬಗಳು ದೌರ್ಬಲ್ಯಕ್ಕೆ ಪಕ್ಕಾಗುವುದನ್ನು ಇದು ಕಡಿಮೆಗೊಳಿಸುತ್ತದೆ.

ಕೃಷಿಯೇತರ ವಲಯದ ಅಭಿವೃದ್ಧಿ ಕಾರ್ಯವು ಆಯಾ ಪ್ರದೇಶಗಳ ಕೃಷಿ ಸಾಧನೆಯ ಮಟ್ಟವನ್ನು ಅವಲಂಬಿಸಿದೆ. ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳು ಕೃಷಿಯಲ್ಲಿ ಸಾಕಷ್ಟು ಉದ್ಯೋಗಾವಕಾಶಗಳನ್ನು ಒದಗಿಸಲು ಸಾಧ್ಯವಾಗದೆ ಹೋಗಬಹುದು. ಹೀಗಾದಾಗ ರೈತರ ಕುಟುಂಬಗಳು ಕಡಿಮೆ ಆದಾಯವನ್ನು ಹೊಂದಬೇಕಾಗುತ್ತದೆ ಮತ್ತು ಬೆಳೆ ವೈಫಲ್ಯದಿಂದುಂಟಾಗುವ ಅಪಾಯ ಸಾಧ್ಯತೆಗಳಿಗೆ ಪಕ್ಕಾಗುತ್ತವೆ. ಇದರ ಪರಿಣಾಮವಾಗಿ ಈ ಪ್ರದೇಶಗಳಲ್ಲಿ ಕೃಷಿಯೇತರ ಚಟುವಟಿಕೆಗಳು ಕೃಷಿ ವಲಯದ ದೌರ್ಬಲ್ಯದಿಂದಾಗಿ ತಲೆಯೆತ್ತುತ್ತವೆ (ಇದನ್ನು "ತಳ್ಳುವ ಅಂಶಗಳು" ಎಂದು ಹೆಸರಿಸಲಾಗಿದೆ). ಇದಕ್ಕೆ ವ್ಯತಿರಿಕ್ತವಾಗಿ, ಕೃಷಿಯಲ್ಲಿ ಅಭಿವೃದ್ಧಿ ಹೊಂದಿದ ಜಿಲ್ಲೆಗಳಲ್ಲಿ ಕೃಷಿಯಿಂದ ದೊರೆತ ಅಧಿಕ ಆದಾಯವನ್ನು ಕೃಷಿಯೇತರ ಚಟುವಟಿಕೆಗಳಿಗೆ ತೊಡಗಿಸಿ ವಿವಿಧ ಮೂಲಗಳಿಂದ ಆದಾಯವನ್ನು ಪಡೆಯಬಹುದಾಗಿದೆ (ಸೆಳೆದುಕೊಳ್ಳುವ ಅಂಶಗಳು).

ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದಿಲ್ಲದ ಪ್ರದೇಶಗಳಲ್ಲಿ ಕೃಷಿಯೇತರ ಚಟುವಟಿಕೆಗಳು ಅಭಿವೃದ್ಧಿ ಹೊಂದುವ ಪ್ರಕ್ರಿಯೆಯಲ್ಲಿ ವ್ಯತ್ಯಾಸಗಳು ತೋರಿಬರುವುದರಿಂದ, ಕೃಷಿ ಮತ್ತು ಕೃಷಿಯೇತರ ವಲಯಗಳಲ್ಲಿ ಉಂಟಾಗುವ ಸಂಪರ್ಕವು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುವುದನ್ನು ನಿರೀಕ್ಷಿಸಬಹುದಾಗಿದೆ. ವಲಯಗಳಲ್ಲಿನ ಈ ಬಾಂಧವ್ಯಗಳನ್ನು "ಸಂಪರ್ಕಗಳು" ಎಂದು ಹೆಸರಿಸಲಾಗಿದೆ. ಈ ಸಂಪರ್ಕಗಳನ್ನು ಎಚ್ಚರದಿಂದ ಹಾಗೂ ಆಮೂಲಾಗ್ರವಾಗಿ ಅಧ್ಯಯಿಸಬೇಕಾಗುತ್ತದೆ ಮತ್ತು ಆ ಮೂಲಕ ಭಾರತೀಯ ಗ್ರಾಮೀಣ ವಲಯದ ಅನುಷ್ಠಾನಸಾಧ್ಯವಾದ ಒಂದು ಕಾರ್ಯಮಾದರಿಯನ್ನು ರೂಪಿಸಬೇಕಾಗುತ್ತದೆ. ಇದರಿಂದಾಗಿ ಈ ಬಗ್ಗೆ ಸಂಶೋಧನಾ ತಿಳುವಳಿಕೆಯನ್ನು ಹೊಂದಬಹುದಾಗಿದೆ ಮತ್ತು ಕಾರ್ಯನೀತಿಯನ್ನು ರೂಪಿಸಬಹುದಾಗಿದೆ. ಇದಕ್ಕಾಗಿ ಪ್ರಸ್ತುತ ಅಧ್ಯಯನವು ಭಾರತದಲ್ಲಿನ ಕೃಷಿ ಹಾಗೂ ಕೃಷಿಯೇತರ ವಲಯಗಳ ನಡುವಿನ ಸಂಪರ್ಕವನ್ನು ನಿಕಟವಾಗಿ ಅರಿಯಲು ಪ್ರಯತ್ನಿಸಿದೆ. ಈ ಪ್ರಯತ್ನವನ್ನು ಸಾಧ್ಯವಾಗಿಸುವುದಕ್ಕಾಗಿ ವಿವಿಧ ಪ್ರದೇಶಗಳ ಕೃಷಿ ಅಭಿವೃದ್ಧಿ ಮಟ್ಟವನ್ನು ತಿಳಿದುಕೊಳ್ಳುವುದಕ್ಕಾಗಿ ಹಾಗೂ ಈಗಾಗಲೇ ಚಾಲ್ತಿಯಲ್ಲಿರುವ ಕಾರ್ಯನೀತಿ ಅಂಶಗಳನ್ನು ಅಧ್ಯಯಿಸಲು ಒತ್ತು ನೀಡಿದೆ.

## ಉದ್ದೇಶಗಳು

ಈ ಅಧ್ಯಯನವು ಭಾರತದ ಗ್ರಾಮೀಣ ಕೃಷಿಯೇತರ ವಲಯದ ಬಗ್ಗೆ ಸ್ಪಷ್ಟ ಹಾಗೂ ಉತ್ತಮ ತಿಳುವಳಿಕೆಯನ್ನು ಹೊಂದುವ ಉದ್ದೇಶವನ್ನು ಹೊಂದಿದೆ. ಜೊತೆಗೆ ಕೃಷಿ ವಲಯದೊಡನೆ ಈ ವಲಯವು ಅಭಿವೃದ್ಧಿ ಪಡಿಸಿಕೊಂಡಿರಬಹುದಾದ ಸಂಪರ್ಕಗಳನ್ನು ತಿಳಿಯುವ ಉದ್ದೇಶವನ್ನೂ ಹೊಂದಿದೆ. ಇದಕ್ಕಾಗಿ ಕೆಳಕಂಡ ಅಂಶಗಳನ್ನು ಉದ್ದೇಶದ ಭಾಗಗಳಾಗಿ ರೂಪಿಸಿಕೊಳ್ಳಲಾಗಿದೆ:

- ಹೆಚ್ಚಿನ ಕೃಷಿ ಉತ್ಪಾದಕತೆಯು ಆರ್‌ಎನ್‌ಎಫ್‌ಎಸ್ ಅನ್ನು ಹೇಗೆ ಬಾಧಿಸುತ್ತದೆ ಎಂಬುದನ್ನು ತಿಳಿದುಕೊಳ್ಳುವುದು.
- ಬೆಳೆ ವೈವಿಧ್ಯೀಕರಣವು ಆರ್‌ಎನ್‌ಎಫ್‌ಎಸ್ ಅನ್ನು ಹೇಗೆ ಬಾಧಿಸುತ್ತದೆ ಎನ್ನುವುದನ್ನು ವಿಶ್ಲೇಷಿಸುವುದು.
- ಸಣ್ಣ ಮತ್ತು ಅತಿಸಣ್ಣ ರೈತರ ಉಪಸ್ಥಿತಿಯು ಆರ್‌ಎನ್‌ಎಫ್‌ಎಸ್ ಮೇಲೆ ಉಂಟು ಮಾಡುವ ಪರಿಣಾಮವನ್ನು ಅಧ್ಯಯನ ಮಾಡುವುದು.
- ಆಧುನಿಕ ವಲಯದ (ನಗರಗಳ ಔಪಚಾರಿಕ ವಲಯ) ಬೆಳವಣಿಗೆಯು ಆರ್‌ಎನ್‌ಎಫ್‌ಎಸ್ ಮೇಲೆ ಉಂಟುಮಾಡುವ ಪರಿಣಾಮವನ್ನು ತಿಳಿದುಕೊಳ್ಳುವುದು.
- ಗ್ರಾಮೀಣ ಕೃಷಿಯೇತರ ಉದ್ದಿಮೆಗಳಿಗೆ ಸಿಗುವ ಸಾಲ ಸೌಲಭ್ಯದಿಂದಾಗಿ ಉಂಟಾಗುವ ಪರಿಣಾಮಗಳನ್ನು ಅಧ್ಯಯಿಸುವುದು.

## ಕಾರ್ಯ ವಿಧಾನ

ಭಾರತದ ಗ್ರಾಮೀಣ ಕೃಷಿಯೇತರ ವಲಯದ ಸ್ಥಿತಿಗತಿಗಳು ಹಾಗೂ ಕಾರ್ಯಕ್ಷಮತೆಯನ್ನು ಅರಿಯಲು ಹಾಗೂ ಆ ಬಗ್ಗೆ ಒಂದು ರಾಷ್ಟ್ರೀಯ ಮೇಲ್ನೋಟವನ್ನು ಒದಗಿಸುವ ಸಲುವಾಗಿ ಪ್ರಸ್ತುತ ಅಧ್ಯಯನವು ವಿವಿಧ ಉಪದತ್ತಾಂಶ ಮೂಲಗಳನ್ನು ಬಳಸಿಕೊಂಡಿದೆ. ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯ ೫೯, ೬೭, ೬೮ ಹಾಗೂ ೭೦ನೇ ಸುತ್ತುಗಳಲ್ಲಿ ಸಾಲ ಮತ್ತು ಬಂಡವಾಳ ಹೂಡಿಕೆ, ರೈತರ ಸ್ಥಿತಿಗತಿಗಳ ಅಂದಾಜೀಕರಣ, ಉದ್ಯೋಗಗಳು ಮತ್ತು ನಿರುದ್ಯೋಗ ಇತ್ಯಾದಿಗಳ ಬಗ್ಗೆ ನಡೆಸಿದ ಸಮೀಕ್ಷೆಯ ಘಟಕ ದತ್ತಾಂಶ ದಾಖಲೆಗಳನ್ನು ಅಧ್ಯಯನಕ್ಕೆ ಉಪಯೋಗಿಸಿಕೊಳ್ಳಲಾಗಿದೆ. ಜೊತೆಗೆ ರಾಷ್ಟ್ರೀಯ ಆನ್ವಯಿಕ ಆರ್ಥಿಕ ಸಂಶೋಧನಾ ಪರಿಷತ್ತು ಮತ್ತು ಮೇರಿಲ್ಯಾಂಡ್ ವಿಶ್ವವಿದ್ಯಾಲಯ ಇವುಗಳು ಒಟ್ಟಾಗಿ ೨೦೧೧–೧೨ರಲ್ಲಿ ನಡೆಸಿದ ಭಾರತದ ಮಾನವ ಅಭಿವೃದ್ಧಿ ಸಮೀಕ್ಷೆಯ ದತ್ತಾಂಶವನ್ನೂ ಸಹ ಬಳಸಿಕೊಳ್ಳಲಾಗಿದೆ.

ಉಪದತ್ತಾಂಶದ ವಿಶ್ಲೇಷಣೆಯು ಕೃಷಿಯೇತರ ವಲಯದ ಸ್ವಲ್ಪ ಮಟ್ಟದ ಹಾಗೂ ಪರಿಮಾಣಾತ್ಮಕವಾದ ಚಿತ್ರವನ್ನು ಮಾತ್ರ ಒದಗಿಸುತ್ತದೆ. ಹಾಗಾಗಿ ಕೃಷಿ ಮತ್ತು ಕೃಷಿಯೇತರ ವಲಯಗಳ ಸಂಪರ್ಕಗಳನ್ನು ಹೆಚ್ಚು ಪ್ರಮಾಣದಲ್ಲಿ ಮತ್ತು ಗುಣಾತ್ಮಕ

---

೧ ಮೀನಾಕ್ಷಿ ರಾಜೀವ್, ಪ್ರಾಧ್ಯಾಪಕರು, ಐಸೆಕ್; ಮನೋಜಿತ್ ಭಟ್ಟಾಚಾರ್ಜಿ, ಪ್ರಾಧ್ಯಾಪಕರು, ಸಂತ ಜೋಸೆಫರ ಮಹಾವಿದ್ಯಾಲಯ.
ಈ ಕ್ಷೇತ್ರದಲ್ಲಿ ಅಧ್ಯಯನವನ್ನು ಕೈಗೊಳ್ಳಲು ಬೆಂಬಲವನ್ನು ನೀಡಿದ್ದಕ್ಕಾಗಿ ಅಧ್ಯಯನಕಾರರು ಐಸಿಎಸ್‌ಎಸ್‌ಆರ್ ಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದಾರೆ. ಮೀನಾಕ್ಷಿ ರಾಜೀವ್‌ರವರು ಐಸೆಕ್ ಗೆ ಬೆಂಬಲವನ್ನು ನೀಡಿದ್ದಕ್ಕಾಗಿ ಆರ್‌ಬಿಐ ಅನ್ನು ವಂದಿಸುತ್ತಿದ್ದಾರೆ. ಅಧ್ಯಯನದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳೆಲ್ಲವೂ ಲೇಖಕರದೇ ಆಗಿವೆ.

ಸಂಪಾದಕರು:
ಎಸ್. ಮಾನಸಿ


ಮಟ್ಟದಲ್ಲಿ ತಿಳಿಯುವ ಸಲುವಾಗಿ ಪ್ರಾಥಮಿಕ ಸಮೀಕ್ಷೆಯೊಂದನ್ನು ನಡೆಸಲಾಯಿತು. ಈ ಸಮೀಕ್ಷೆಗಾಗಿ ಮೂರು ರಾಜ್ಯಗಳನ್ನು ಅಂದರೆ ಕರ್ನಾಟಕ, ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಆಯ್ಕೆ ಮಾಡಿದ ಈ ಮೂರು ರಾಜ್ಯಗಳೂ ಸಹ ಗ್ರಾಮೀಣಾಭಿವೃದ್ಧಿ ಹಾಗೂ ಕೃಷಿ ಮತ್ತು ಕೃಷಿಯೇತರ ವಲಯಗಳ ನಡುವಣ ಸಂಪರ್ಕಗಳಿಗೆ ಸಂಬಂಧಿಸಿದಂತೆ ತಮ್ಮದೇ ಆದ ವಿಶಿಷ್ಟತೆಯನ್ನು ಹೊಂದಿದ್ದವು. ನಡೆಸಿದ ಕ್ಷೇತ್ರ ಸಮೀಕ್ಷೆಯು ಇವುಗಳನ್ನರಿಯಲು ನೆರವು ನೀಡಿತು.

ಕರ್ನಾಟಕ ರಾಜ್ಯವನ್ನು ಏಕೆ ಆಯ್ಕೆ ಮಾಡಲಾಯಿತೆಂದರೆ, ಆ ರಾಜ್ಯದಲ್ಲಿ ಕೃಷಿ ಅಭಿವೃದ್ಧಿಯು ಹೋಲಿಕೆಯ ದೃಷ್ಟಿಯಿಂದ ಕಡಿಮೆ ಪ್ರಮಾಣದಲ್ಲಿದ್ದರೂ ಸಹ ಅದರಲ್ಲಿನ ಆಧುನಿಕ ವಲಯವು ವೇಗವಾಗಿ ಬೆಳೆಯುತ್ತಿದೆ ಎಂಬ ಕಾರಣಕ್ಕಾಗಿರುತ್ತದೆ. ಈ ರಾಜ್ಯದಲ್ಲಿನ ಸಮೀಕ್ಷೆಗಾಗಿ ಬೆಂಗಳೂರು ನಗರಕ್ಕೆ ಸಮೀಪವಿರುವ ಐದು ಜಿಲ್ಲೆಗಳನ್ನು ಅಂದರೆ ಮಂಡ್ಯ, ರಾಮನಗರ, ಕೋಲಾರ, ಬೆಂಗಳೂರು ಗ್ರಾಮಾಂತರ ಹಾಗೂ ತುಮಕೂರು ಜಿಲ್ಲೆಗಳನ್ನು ಆಯ್ಕೆ ಮಾಡಲಾಯಿತು. ಈ ಆಯ್ಕೆಯು ಸಮೀಕ್ಷೆಗೆ ಹೇಗೆ ನೆರವಾಗುತ್ತದೆಂದರೆ, ನಗರ ಕೇಂದ್ರವೊಂದರ ಸಾಮೀಪ್ಯವು ಕೃಷಿಯೇತರ ವಲಯದಲ್ಲಿನ ಚಟುವಟಿಕೆಗಳಲ್ಲಿ ಉಂಟಾಗಬಹುದಾದ ವ್ಯತ್ಯಾಸಗಳನ್ನು ಕಡಿಮೆ ಮಾಡುತ್ತದೆ. ಇದರಿಂದಾಗಿ ನಗರ ಕೇಂದ್ರದ ಸಾಮೀಪ್ಯದಿಂದುಂಟಾಗಿರುವ ಸಂಪರ್ಕಗಳ ಮೇಲೆ ಕೇಂದ್ರೀಕರಿಸಲೂ ಸಹ ಸಾಧ್ಯವಾಗುತ್ತದೆ. ಈ ಜಿಲ್ಲೆಗಳಾದ್ಯಂತ ಮಿತಿಗೊಳಿಸಿದ ಮಾದರಿಯನ್ನು ಅಂದರೆ ಕೇವಲ ೧೦೦ ಕುಟುಂಬಗಳಿಂದ ಮಾತ್ರ ದತ್ತಾಂಶವನ್ನು ಪಡೆಯಲಾಯಿತು. ಈ ಕುಟುಂಬಗಳು ನಿರ್ವಹಿಸುವ ವಿವಿಧ ರೀತಿಯ ಚಟುವಟಿಕೆಗಳು ಹಾಗೂ ಸಾಧಿಸಿರುವ ಸಂಪರ್ಕಗಳನ್ನು ತಿಳಿಯುವ ಸಲುವಾಗಿ ಅದಕ್ಕಾಗಿಯೇ ಸಿದ್ಧಪಡಿಸಿದ ಪ್ರಶ್ನಾವಳಿಯನ್ನು ಉಪಯೋಗಿಸಲಾಯಿತು. ಪಶ್ಚಿಮ ಬಂಗಾಳವನ್ನು ಹೋಲಿಕೆಯ ದೃಷ್ಟಿಯಿಂದ ಅದು ಕೃಷಿಯಲ್ಲಿ ಸಾಧಿಸಿದ ಅಭಿವೃದ್ಧಿ ಹಾಗೂ ಅಲ್ಲಿಯ ಗ್ರಾಮೀಣ ಕೃಷಿಯೇತರ ಚಟುವಟಿಕೆಗಳ ಅಗಾಧತೆಯಿಂದಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇದೇ ರೀತಿಯಾಗಿ, ಹೋಲಿಕೆಯ ದೃಷ್ಟಿಯಿಂದ ಆರ್‌ಎನ್‌ಎಫ್‌ಎಸ್‌ನಲ್ಲಿ ಕಡಿಮೆ ಅಭಿವೃದ್ಧಿ ಹೊಂದಿರುವ ಅಸ್ಸಾಂ ರಾಜ್ಯವನ್ನೂ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಯಿತು.

## ಪ್ರಮುಖ ಫಲಿತಾಂಶಗಳು

ಉಪದತ್ತಾಂಶದ ವಿಶ್ಲೇಷಣೆಯ ಪ್ರಕಾರ ೨೦೧೧-೧೨ರ ಸಾಲಿನಲ್ಲಿ ಗ್ರಾಮೀಣ ಪ್ರದೇಶಗಳ ಒಟ್ಟಾರೆ ಉದ್ಯೋಗಗಳ ಪೈಕಿ ಆರ್‌ಎನ್‌ಎಫ್‌ಎಸ್ ಶೇ ೩೬ ರಷ್ಟು ಪಾಲನ್ನು ಹೊಂದಿತ್ತು. ಇದಕ್ಕೆ ಎರಡು ವರ್ಷಗಳ ಹಿಂದೆ ಅಂದರೆ ೨೦೦೯-೧೦ರಲ್ಲಿ ಈ ಪಾಲು ಶೇ ೨೭.೩ ರಷ್ಟು ಮಾತ್ರ ಇತ್ತು. ಕೃಷಿಯಲ್ಲಿ ಅಭಿವೃದ್ಧಿ ಹೊಂದಿದ ರಾಜ್ಯಗಳು ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿನ ಪಾಲನ್ನು ಹೊಂದಿದ್ದವು. ಕೇರಳದಲ್ಲಿ ಈ ಪ್ರಮಾಣವು ಶೇ ೬೮.೫೮ ರಷ್ಟೂ ಮತ್ತು ತಮಿಳುನಾಡಿನಲ್ಲಿ ಶೇ ೪೮.೮ ರಷ್ಟೂ ಇತ್ತು. ಹೆಚ್ಚಿನ ಆರ್‌ಎನ್‌ಎಫ್‌ಎಸ್ ಚಟುವಟಿಕೆಗಳು ತಮ್ಮದೇ ಲೆಕ್ಕಪತ್ರ ಹೊಂದಿರುವ ಉದ್ದಿಮೆಗಳಾಗಿದ್ದವು. ಅಂದರೆ ಕೂಲಿಕಾರರು ಇಲ್ಲದ ಉದ್ದಿಮೆಗಳು (ಎಲ್ಲಾ ಉದ್ದಿಮೆಗಳ ಶೇ ೯೧ ರಷ್ಟು). ಈ ಉದ್ದಿಮೆಗಳು ಬಹುಪಾಲು ಸೇವೆಯಾಧಾರಿತ ಚಟುವಟಿಕೆಗಳನ್ನು ಹೊಂದಿದ್ದವು – ಅಂದರೆ ಗ್ರಾಮೀಣ ಕುಟುಂಬಗಳಿಗೆ ಸೇರಿದ ಪೆಟ್ಟಿಗೆ ಅಂಗಡಿಗಳಾಗಿದ್ದವು. ಉಳಿದಂತೆ, ನಿರ್ಮಾಣ ಕಾರ್ಯದಲ್ಲಿ ತೊಡಗಿದ ಆರ್‌ಎನ್‌ಎಫ್‌ಎಸ್ ಚಟುಚಟಿಕೆಗಳಲ್ಲೇ ಬಹುಪಾಲು (ಶೇ ೩೨ ರಷ್ಟು) ಉದ್ಯೋಗಾವಕಾಶ ದೊರಕಿತ್ತು. ಕೇವಲ ಐದನೇ ಒಂದು ಭಾಗದ ಉದ್ದಿಮೆಗಳು ಮಾತ್ರ ತಯಾರಿಕಾ ಕಾರ್ಯದಲ್ಲಿ ತೊಡಗಿದ್ದವು. ಕೆಳಗೆ ತೋರಿಸಿರುವ ಚಿತ್ರದಲ್ಲಿ ಒಟ್ಟಾರೆ ಗ್ರಾಮೀಣ ಕೃಷಿಯೇತರ ಉದ್ಯೋಗಗಳು ಯಾವ ಯಾವ ಉದ್ದಿಮೆಗಳಿಂದ ದೊರಕಿವೆ ಎಂಬುದನ್ನು ತಿಳಿಯಬಹುದಾಗಿದೆ:


**ಚಿತ್ರ ೧: ವಿವಿಧ ವಲಯಗಳಿಂದ ದೊರೆತ ಉದ್ಯೋಗ**




Source: NSSO 67th Round Enterprise Survey

ಮೇಲಿನ ಚಿತ್ರದಲ್ಲಿನ ಉದ್ದಿಮೆಗಳಲ್ಲಿ ಕೇವಲ ಶೇ.೧೩ ರಷ್ಟು ಮಾತ್ರ ಆಧುನಿಕವೆಂದು ಕರೆಸಿಕೊಳ್ಳಬಲ್ಲವುಗಳಾಗಿದ್ದವು. ಬಹುಪಾಲು ಉದ್ದಿಮೆಗಳಲ್ಲಿ ರೋಗಗ್ರಸ್ಥತೆಯು ವ್ಯಾಪಕವಾಗಿತ್ತು. ಕೆಲವು ಉದ್ದಿಮೆಗಳು ನಿಂತ ನೀರಾಗಿದ್ದರೆ (ಶೇ ೪೫ ರಷ್ಟು), ಉಳಿದ ಕೆಲವು ಉದ್ದಿಮೆಗಳು ಕರ್ತವ್ಯ ನಿರ್ವಹಿಸುತ್ತಿರಲಿಲ್ಲ (ಶೇ ೧೫ ರಷ್ಟು), ಅಥವಾ ಸಂಕುಚಿತಗೊಂಡಿದ್ದವು (ಶೇ ೮ ರಷ್ಟು). ಆಧುನಿಕ ಆರ್‌ಎನ್‌ಎಫ್‌ಎಸ್ ಉದ್ದಿಮೆಗಳನ್ನು ಹೋಲಿಕೆಯ ದೃಷ್ಟಿಯಿಂದ ಹೆಚ್ಚಾಗಿ ಹೊಂದಿರುವ ರಾಜ್ಯಗಳಲ್ಲೂ ಸಹ ಇದೇ ಪರಿಸ್ಥಿತಿಯಿತ್ತು. ಈ ಪರಿಸ್ಥಿತಿಯು ಸಂಪನ್ಮೂಲಗಳ ಹಾಗೂ ಬೇಡಿಕೆಯ ಕೊರತೆ ಹಾಗೂ ಸಾಲ ಸೌಲಭ್ಯ ಸಿಗದಿರುವಿಕೆಯಿಂದ ಉಂಟಾಗಿರಬಹುದಾಗಿದೆ.


**ಚಿತ್ರ ೨: ಭಾರತದಲ್ಲಿ ಕೃಷಿಯೇತರ ಉದ್ದಿಮೆಗಳ ಸ್ಥಿತಿಗತಿಗಳು**




Source: NSSO 67th Round Enterprise Survey:

ಚಿತ್ರ ೩ ರಲ್ಲಿ ಕಾಣುವಂತೆ ತಾಂತ್ರಿಕತೆ ಹಾಗೂ ತಿಳುವಳಿಕೆಗಳೂ ಸಹ ಸಿಗುವುದು ಬಹಳ ಕಷ್ಟವಾಗಿತ್ತು.

**ಚಿತ್ರ ೩: ತಾಂತ್ರಿಕತೆ/ತಿಳುವಳಿಕೆಯು ಸಿಗುವಿಕೆ**




Source: 70th Round SAS (2012-13)

ಈ ಬಗ್ಗೆ ಪ್ರತಿಗಾಮಿ ವಿಶ್ಲೇಷಣೆಯೊಂದನ್ನು ಮಾಡಲಾಯಿತು. ಆ ಪ್ರಕಾರ, ಉತ್ಪಾದಕತೆಯ ಹೆಚ್ಚಳ ಹಾಗೂ ಸಣ್ಣ ಮತ್ತು ಅತಿ ಸಣ್ಣ ರೈತರ ಇರುವಿಕೆಗಳು ಉದ್ಯೋಗಾವಕಾಶದ ಬಗ್ಗೆ ಅತಿ ಕಡಿಮೆ ಸಕಾರಾತ್ಮಕ ಪರಿಣಾಮವನ್ನು ಬೀರಿದ್ದವು. ಅದರಲ್ಲೂ ವಿಶೇಷವಾಗಿ ತಯಾರಿಕಾ ಕ್ಷೇತ್ರ ಮತ್ತು ಸೇವಾ ಕ್ಷೇತ್ರಗಳಲ್ಲಿನ ಉದ್ಯೋಗಾವಕಾಶಗಳ ಈ ಸಕಾರಾತ್ಮಕ ಪರಿಣಾಮವು ಕೊಂಚ ಪರಿಣಾಮ ಮಾತ್ರ ಬೀರಿತ್ತು. ಅಧ್ಯಯನದ ಫಲಿತಾಂಶಗಳಿಂದ ತಿಳಿದುಬಂದ ಇನ್ನೊಂದು ಅಂಶವೇನೆಂದರೆ ಕಾಲಾನುಕ್ರಮದಲ್ಲಿ ಗ್ರಾಮೀಣ ಕೃಷಿಯೇತರ ವಲಯದ ಕಾರ್ಮಿಕರು ತಯಾರಿಕಾ ಕ್ಷೇತ್ರ ಮತ್ತು ಸೇವಾ ಕ್ಷೇತ್ರಗಳಿಂದ ನಿರ್ಮಾಣ ಕ್ಷೇತ್ರಕ್ಕೆ ತಮ್ಮ ವೃತ್ತಿಯನ್ನು ಬದಲಾಯಿಸಿಕೊಂಡಿರುವುದು.

ಈ ಅಧ್ಯಯನದ ಫಲಿತಾಂಶಗಳ ಟೋಬಿಟ್ ಪ್ರತಿಗಾಮಿತ್ವ ವಿಶ್ಲೇಷಣೆಯೊಂದನ್ನೂ ಸಹ ನಡೆಸಲಾಗಿದೆ. ಅದರ ಪ್ರಕಾರ, ಸಣ್ಣ ಮತ್ತು ಅತಿಸಣ್ಣ ರೈತರ ಕುಟುಂಬಗಳಲ್ಲಿನ ಸದಸ್ಯರುಗಳು ಕೈಗೊಳ್ಳುವ ಕೃಷಿಯೇತರ ವ್ಯಾಪಾರಗಳಿಂದ ಬರುವ ಆದಾಯವು ಗಣನೀಯ ಅತಿ ಸಣ್ಣ ಪ್ರಮಾಣದಲ್ಲಿ ಕೃಷಿ ಅಭಿವೃದ್ಧಿಯ ಪ್ರಭಾವಕ್ಕೊಳಪಟ್ಟಿರುತ್ತದೆ. ಇದೇ ರೀತಿಯಲ್ಲಿ ಜಿಲ್ಲಾ ಮಟ್ಟದ ಮಾಸಿಕ ತಲಾ ವ್ಯಕ್ತಿವಾರು ಬಳಕೆ ಖರ್ಚು, ಸಾಲ ಸಿಗುವಿಕೆ, ಮಾಧ್ಯಮಗಳನ್ನು ಬಳಸಿಕೊಳ್ಳುವಿಕೆ ಇತ್ಯಾದಿಗಳೂ ಸಹ ಕೃಷಿ ಅಭಿವೃದ್ಧಿಯ ಪ್ರಭಾವಕ್ಕೆ ಅತಿ ಸಣ್ಣ ಪ್ರಮಾಣದಲ್ಲಿ ಒಳಪಟ್ಟಿರುತ್ತವೆ. ಸಾಲಕ್ಕೆ ಸಂಬಂಧಿಸಿದಂತೆ ಈ ವಿಶ್ಲೇಷಣೆಯು ತಿಳಿಸಿದ್ದೇನೆಂದರೆ, ತೆಗೆದುಕೊಂಡ ಪ್ರತಿ

ಹೆಚ್ಚುವರಿ ಸಾಲವೂ ಕೃಷಿಯೇತರ ಆದಾಯವನ್ನು ಸರಾಸರಿ ಅಂದಾಜು ೯೦೦ ರೂಪಾಯಿಗಳಷ್ಟು ಹೆಚ್ಚು ಮಾಡಿದೆಯೆಂಬುದು. ಜೊತೆಗೆ ಸಿಗುವ ಸಾಲದಲ್ಲಿ ಒಂದು ರೂಪಾಯಿಯ ಹೆಚ್ಚಳವೂ ಸಹ (ಅತಿ ದೊಡ್ಡ ಪ್ರಮಾಣದ ಸಾಲಕ್ಕೆ ಸಂಬಂಧಿಸಿದಂತೆ) ಆದಾಯವನ್ನು ಸರಾಸರಿಯಾಗಿ ೦.೦೩ ರಿಂದ ೦.೦೪ ರೂಪಾಯಿಯವರೆಗೆ ಹೆಚ್ಚಿಸಿದೆ. ಈ ಚಟುವಟಿಕೆಗಳಿಗೆ ಮುಖ್ಯವಾಗಿ ಕುಟುಂಬ ಸದಸ್ಯರ ಶ್ರಮವನ್ನೇ ಬಳಸಿಕೊಳ್ಳಲಾಗಿತ್ತು. ದೊಡ್ಡ ಕುಟುಂಬಗಳು ಕೃಷಿಯೇತರ ಚಟುವಟಿಕೆಗಳಿಂದ ಹೆಚ್ಚಿನ ಆದಾಯವನ್ನು ಗಳಿಸಿದ್ದವು. ಇದೇ ರೀತಿಯಾಗಿ, ಕೃಷಿಯಲ್ಲಿ ಕಡಿಮೆ ಆದಾಯವನ್ನು ಗಳಿಸುತ್ತಿದ್ದ ಕುಟುಂಬಗಳೂ ಕೃಷಿಯೇತರ ಚಟುವಟಿಕೆಗಳಲ್ಲಿ ಹೆಚ್ಚಿನ ಆದಾಯ ಗಳಿಸಿದ್ದವು.

ಕ್ಷೇತ್ರ ಸಮೀಕ್ಷೆಗಳು ಆಯ್ದ ಅಧ್ಯಯನ ಕ್ಷೇತ್ರಗಳಲ್ಲಿ ಕೃಷಿಯೇತರ ವಲಯವು ಪಡೆದುಕೊಂಡಿರುವ ಸ್ವರೂಪ ಮತ್ತು ಸಾಧಿಸಿರುವ ಅಭಿವೃದ್ಧಿಯ ತೀರಾ ಇತ್ತೀಚಿನ ಚಿತ್ರಣವನ್ನು ಕೊಡುತ್ತವೆ. ಕರ್ನಾಟಕ ರಾಜ್ಯದಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಜನರನ್ನು ಸಾಗುವಳಿ ಜಮೀನು ಉಳ್ಳವರು ಅಥವಾ ಇಲ್ಲದವರು ಎಂದು ನಿರ್ದಿಷ್ಟವಾಗಿ ಗುರುತಿಸುವುದು ಕಂಡುಬರುತ್ತದೆ. ಸಾಗುವಳಿ ಜಮೀನು ಇಲ್ಲದ ಕುಟುಂಬಗಳು ಸಾಂಪ್ರದಾಯಿಕವಾದ ಜಾತಿ ಆಧಾರಿತ ವೃತ್ತಿಗಳಲ್ಲಿ ತೊಡಗಿರುತ್ತವೆ ಅಥವಾ ದಿನಗೂಲಿ ಕೆಲಸ ಮಾಡುತ್ತದೆ. ಈ ಕುಟುಂಬಗಳು ಆರ್‌ಎನ್‌ಎಫ್‌ಎಸ್ ಚಟುವಟಿಕೆಗಳಲ್ಲಿ ತೊಡಗುವುದು ಕಡಿಮೆ. ಸಾಗುವಳಿ ಜಮೀನು ಇರುವ ಕುಟುಂಬಗಳು ವಿವಿಧ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುತ್ತವೆ. ಜೊತೆಗೆ, ಈ ಕುಟುಂಬಗಳಲ್ಲಿನ ಕೃಷಿಯೇತರ ಉದ್ದಿಮೆಗಳು ಸಾಮಾನ್ಯವಾಗಿ ಆಧುನಿಕ ವಲಯದೊಡನೆ ಸಂಪರ್ಕ ಹೊಂದಿರುತ್ತವೆ. ಕೃಷಿಯೇತರ ಆದಾಯವು ಹೆಚ್ಚಿನ ಪ್ರಕರಣಗಳಲ್ಲಿ ಬೆಳೆಗಳಿಂದ ಬರುವ ಆದಾಯಕ್ಕಿಂತ ಹೆಚ್ಚಾಗಿತ್ತು. ಆ ಪೈಕಿ ನಿರ್ಮಾಣ ಕಾರ್ಯದೊಡನೆ ಸಂಪರ್ಕ ಹೊಂದಿದ ಆರ್‌ಎನ್‌ಎಫ್‌ಎಸ್ ಉದ್ದಿಮೆಗಳು ಬಹು ಲಾಭದಾಯಕವಾಗಿದ್ದವು. ಈ ಉದ್ದಿಮೆಗಳ ಪೈಕಿ ಶೇ.೯೦ ರಷ್ಟು ಉದ್ದಿಮೆಗಳು ವರ್ಷವೊಂದಕ್ಕೆ ೨ ಲಕ್ಷ ರೂಗಳಿಗೂ ಹೆಚ್ಚಿನ ಆದಾಯವನ್ನು ಗಳಿಸುತ್ತಿದ್ದವು. ರೋಗಪೀಡಿತ ಉದ್ದಿಮೆಗಳ ಪ್ರಕರಣಗಳು ಕಡಿಮೆ ಇದ್ದವು. ಕೃಷಿಯೇತರ ಉದ್ದಿಮೆಗಳಾದ ರಸಗೊಬ್ಬರಗಳ ಅಂಗಡಿಗಳು ಮತ್ತು ಸಿಮೆಂಟ್ ವಿತರಕ ಅಂಗಡಿಗಳು ವಿಸ್ತರಣೆಗೊಳ್ಳುತ್ತಾ ಹೋಗುತ್ತಿದ್ದವೇ ವಿನ: ಒಂದೇ ಒಂದು ಅಂಗಡಿಯೂ ಸಹ ವ್ಯಾಪಾರದ ಪ್ರಮಾಣವನ್ನು ಕುಗ್ಗಿಸಿರಲಿಲ್ಲ.

ಈ ಅಧ್ಯಯನದಲ್ಲಿ ಕಂಡು ಬಂದ ವಿಶೇಷವೆಂದರೆ ಸಾಂಪ್ರದಾಯಿಕ ಎಳೆದುಕೊಳ್ಳುವಿಕೆಗೆ ವ್ಯತಿರಿಕ್ತವಾಗಿ ಆರ್‌ಎನ್‌ಎಫ್‌ಎಸ್ ಚಟುವಟಿಕೆಯು ಆದಾಯ ಗಳಿಕೆಯ ಒಂದು ಮುಖ್ಯ ಮಾರ್ಗವಾಗಿತ್ತು ಹಾಗೂ ಬೆಳೆ ಬೆಳೆಯುವಿಕೆಗೆ ಹಣವನ್ನು ಒದಗಿಸುತ್ತಿತ್ತು. ಸಾಲ ಸಿಗುವಿಕೆಯು ನಿರಾಶಾದಾಯಕವಾಗಿತ್ತು. ಆದ್ದರಿಂದ ಆರ್‌ಎನ್‌ಎಫ್‌ಎಸ್ ಚಟುವಟಿಕೆಗಳು ಸ್ವಂತ ಉಳಿತಾಯ ಅಥವಾ ಸಾಲಿಗರಿಂದ ಪಡೆದ ದುಡ್ಡಿನಿಂದ ನಡೆಯುತ್ತಿದ್ದವು (ಇದಕ್ಕೆ ವ್ಯತಿರಿಕ್ತವಾಗಿ ಕೃಷಿಗೆ ಸುಲಭವಾಗಿ ಸಾಲ ದೊರೆಯುತ್ತದೆ). ಈ ಚಟುವಟಿಕೆಗಳಿಂದ ಬಂದ ಹೆಚ್ಚಿನ ಆದಾಯದ ಶೇ ೫೦ ಕ್ಕಿಂತಲೂ ಹೆಚ್ಚಿನ ಭಾಗವನ್ನು ಅದೇ ಚಟುವಟಿಕೆಗಳಿಗೆ ಮತ್ತೆ ಮರು ಹೂಡಿಕೆ ಮಾಡಬೇಕಾಗುತ್ತಿತ್ತು (ಇತರೆ ಕಾರಣಗಳಿಗೆ ಖರ್ಚು ಮಾಡುವಂತಿರಲಿಲ್ಲ).

ಪಶ್ಚಿಮ ಬಂಗಾಳದಲ್ಲಿ ಪ್ರಾರಂಭಕ್ಕೆ ಕೃಷಿಯೇತರ ಚಟುವಟಿಕೆಗಳು ಬಹುಮಟ್ಟಿಗೆ ಸಾಂಪ್ರದಾಯಿಕವಾಗಿದ್ದವು. ಅಲ್ಲಿನ ಜನರು ಆಹಾರ ಧಾನ್ಯಗಳನ್ನು ಬೆಳೆಯುವಿಕೆ (ಮುಖ್ಯವಾಗಿ ಭತ್ತ) ಹಾಗೂ ಅದನ್ನು ಮಾರಾಟ ಮಾಡುವುದರಲ್ಲೇ ನಿರತರಾಗಿದ್ದರು. ಈಚೆಗೆ ವಾಣಿಜ್ಯ ಬೆಳೆ ಬೆಳೆಯುವಿಕೆಗೆ ಹೆಚ್ಚಿನ ಒತ್ತನ್ನು ನೀಡಲು ಪ್ರಾರಂಭಿಸಿರುವುದರಿಂದ, ಸಾಂಪ್ರದಾಯಿಕವಾದ ಕೆಲವು ಉದ್ದಿಮೆಗಳಿಗೆ ತೊಂದರೆಯಾಗಿದೆ. ಏಕೆಂದರೆ ಈ ಉದ್ದಿಮೆಗಳು ಭತ್ತದ ಸಾಗುವಳಿಗೆ ಉಪಯುಕ್ತವಾಗುವ ಕುಡ್ಲು ಮತ್ತಿತರ ಅಂಥದೇ ಉಪಕರಣಗಳ ತಯಾರಿಕೆಯಲ್ಲಿ ಮಾತ್ರ ತೊಡಗಿದ್ದವು. ಹೀಗಾಗಿ ಈ ಉದ್ದಿಮೆಗಳಲ್ಲಿ ನಿರತರಾಗಿದ್ದ ಜನರು ತಮ್ಮ ಜೀವನೋಪಾಯಕ್ಕಾಗಿ ಬೇರೆ ಚಟುವಟಿಕೆಗಳಲ್ಲಿ ತೊಡಗಬೇಕಾಗಿದೆ ಮತ್ತು ಇದು ಒಂದು ದೊಡ್ಡ ಸವಾಲಾಗಿ ಪರಿಣಮಿಸಿದೆ.

ಈ ರಾಜ್ಯದಲ್ಲಿ ಔಪಚಾರಿಕ ವಲಯದಲ್ಲಿ ನಿಯಮಿತವಾಗಿ ವೇತನ ಪಡೆಯುವ ಉದ್ಯೋಗಿಗಳು ಆರ್‌ಎನ್‌ಎಫ್‌ಎಸ್ ಚಟುವಟಿಕೆಗಳಿಗೆ ಬಳಕೆ ಮತ್ತು ಹೂಡಿಕೆ ಸಂಪರ್ಕಗಳನ್ನು ಏರ್ಪಡಿಸುತ್ತಿದ್ದು, ಇದರಿಂದಾಗಿ ಆರ್‌ಎನ್‌ಎಫ್‌ಎಸ್‌ನ ಸ್ಪರ್ಧಾತ್ಮಕ ಸಾಮರ್ಥ್ಯವು ಸುಧಾರಿಸಿದೆ. ಸಾಲ ಸೌಲಭ್ಯವು ಕೆಲವು ಮಂದಿ ಕೃಷಿಯೇತರ ಉದ್ದಿಮೆದಾರರಿಗೆ ಮಾತ್ರ ದೊರೆತಿದ್ದು, ಅದರಿಂದ ಅವರಿಗೆ ನೆರವಾಗಿದೆ. ಆದರೆ ಬಹುಪಾಲು ಉದ್ದಿಮೆದಾರರು ಔಪಚಾರಿಕ ಸಾಲ ನೀಡಿಕೆ ಸಂಸ್ಥೆಗಳಿಂದ ಸಾಲ ಸಿಗದೆ ಬಂಡವಾಳದ ಕೊರತೆಯನ್ನು ಅನುಭವಿಸುತ್ತಿದ್ದಾರೆ.

ಇದಕ್ಕೆ ವ್ಯತಿರಿಕ್ತವಾಗಿ, ಹೋಲಿಕೆಯ ದೃಷ್ಟಿಯಿಂದ ಕೃಷಿ ಚಟುವಟಿಕೆಗಳಲ್ಲಿ ಕಡಿಮೆ ಅಭಿವೃದ್ಧಿಯನ್ನು ಹೊಂದಿರುವ ಅಸ್ಸಾಂ ರಾಜ್ಯದಲ್ಲಿ ನೀರಾವರಿ ಕೊರತೆ ಇರುವುದರಿಂದ ವರ್ಷಕ್ಕೆ ಒಂದೇ ಬೆಳೆ ತೆಗೆಯಲು ಸಾಧ್ಯವಾಗುತ್ತಿದೆ. ಕೃಷಿ ಚಟುವಟಿಕೆಗಳಿಂದ ಬರುವ ಆದಾಯ ಕಡಿಮೆಯೇ ಆಗಿದೆ ಮತ್ತು ಯಾವುದೇ ಕೃಷಿಯೇತರ ಚಟುವಟಿಕೆಗಳಲ್ಲಿ ಹೂಡಲು ಹಣ ನೀಡಲು ಅದಕ್ಕೆ ಸಾಧ್ಯವಿಲ್ಲ. ಸಾಲ ಸೌಲಭ್ಯ ದೊರಕದೆ ಇರುವಿಕೆಯು ಈ ಪರಿಸ್ಥಿತಿಯನ್ನು ಇನ್ನೂ ದುಸ್ಸಹನೀಯವಾಗಿ ಮಾಡಿದೆ. ಇದರಿಂದಾಗಿ ರೈತರು ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ಸಾಧ್ಯವಾಗುತ್ತಿಲ್ಲ ಮತ್ತು ಆ ಮೂಲಕ ಅವರ ಆದಾಯಗಳು ಕಡಿಮೆಯಾಗಿಯೇ ಉಳಿದಿವೆ. ಕೆಲವು ಕುಟುಂಬಗಳೇನೋ ಕೃಷಿಯೇತರ ಚಟುವಟಿಕೆಗಳಾದ ಕೊಳಗಳಲ್ಲಿ ಮೀನು ಕೃಷಿ ಮಾಡುವುದು ಮತ್ತು ಕೋಳಿ ಸಾಕಣೆಯಲ್ಲಿ ತೊಡಗಿವೆ. ಆದರೆ ದೊರಕುವ ಮೀನು ಮತ್ತು ಕೋಳಿ ಉತ್ಪನ್ನಗಳು ಅವರ ಬಳಕೆಗೇ ಉಪಯೋಗವಾಗುತ್ತಿರುವುದರಿಂದ, ಈ ಉದ್ದಿಮೆಗಳಿಂದ ಅವರಿಗೆ ಯಾವ ಆದಾಯವೂ ದೊರಕುತ್ತಿಲ್ಲ.

ರಾಜ್ಯದಲ್ಲಿನ ಉತ್ಪಾದಕತಾ ಕೃಷಿಯೇತರ ಚಟುವಟಿಕೆಗಳಲ್ಲಿ ಕೈಮಗ್ಗ ಹಾಗೂ ಕರಕುಶಲ ವಸ್ತುಗಳ ತಯಾರಿಕೆಯು ಪ್ರಮುಖವಾದವುಗಳಾಗಿರುತ್ತವೆ. ಈ ತಯಾರಿಕೆಗಳನ್ನು ಸ್ಥಳೀಯ ಮಟ್ಟದಲ್ಲಿಯೇ ಮಾರಾಟ ಮಾಡುವುದರಿಂದ, ಆ ಪ್ರದೇಶದ ಕೃಷಿ ವಲಯದೊಡನೆಯೂ ಬಳಕೆ ಸಂಪರ್ಕ ಉಂಟಾಗುತ್ತದೆ. ಆದರೆ ಈ ಉದ್ದಿಮೆಗಳಿಂದ ಬರುವ ಆದಾಯವು ತೃಪ್ತಿಕರ ಮಾರುಕಟ್ಟೆಯ ಅಭಾವದಿಂದ ಕಡಿಮೆ ಪ್ರಮಾಣದಲ್ಲಿಯೇ ಇರುತ್ತದೆ.

ಈಚಿನ ವರ್ಷಗಳಲ್ಲಿ ೮ ರಬ್ಬರ್ ಪ್ಲಾಂಟೇಶನ್‌ಗಳಲ್ಲಿ ಉತ್ಪಾದಿಸಿದ ರಬ್ಬರ್ ಅನ್ನು ಸ್ವಲ್ಪಮಟ್ಟಿನ ಬಂಡವಾಳ ಹೂಡಿಕೆಯಿಂದ ರಬ್ಬರ್ ಹಾಳೆಗಳಾಗಿ ಸಂಸ್ಕರಿಸಲಾಗುತ್ತಿದೆ. ರಾಜ್ಯ ಸರ್ಕಾರವೂ ಸಹ ಈ ಬೆಳವಣಿಗೆಯನ್ನು ಪ್ರೋತ್ಸಾಹಿಸುತ್ತಿದೆ. ಏಕೆಂದರೆ ಇದೊಂದು ಲಾಭದಾಯಿಕ ಉದ್ದಿಮೆಯಾಗಿದೆ. ಜೊತೆಗೆ ಸರ್ಕಾರವು ಯುವಕರಿಗೆ ಕೇರಳದಲ್ಲಿನ ಯುವಕರೊಂದಿಗೆ ತರಬೇತಿ ಸಹಭಾಗಿತ್ವವನ್ನು ಕಲ್ಪಿಸಿಕೊಡುತ್ತಿದೆ. ಕೇರಳ ರಾಜ್ಯವೂ ಸಹ ರಬ್ಬರ್ ಪ್ಲಾಂಟೇಷನ್‌ಗಳಿಗೆ ಹೆಸರುವಾಸಿಯಾದ್ದರಿಂದ, ಈ ವ್ಯವಸ್ಥೆಯನ್ನು ಮಾಡಲಾಗಿದೆ. ಅಸ್ಸಾಂ ರಾಜ್ಯಕ್ಕೆ ಇಂತಹ ಚಟುವಟಿಕೆಗಳು ಒಳ್ಳೆಯ ಅದಾಯ ಮೂಲಗಳಾಗಿವೆ. ರಾಜ್ಯವು ಬೆಟ್ಟಗುಡ್ಡಗಳಿಂದ ಕೂಡಿರುವುದರಿಂದ, ಇಲ್ಲಿ ಭತ್ತದ ಸಾಗುವಳಿಯು ಕಷ್ಟಸಾಧ್ಯವಾಗಿದೆ. ಕಾಲಾನುಕ್ರಮದಲ್ಲಿ ಈ ರೀತಿಯ ಕೃಷಿಯೇತರ ಲಾಭದಾಯಕ ಉದ್ದಿಮೆಗಳು ಇತರ ಕೃಷಿಯೇತರ ಚಟುವಟಿಕೆಗಳಿಗೆ ತೊಡಗಿಸಲು ಹೆಚ್ಚಿನ ಬಂಡವಾಳವನ್ನು ಸೃಷ್ಟಿಸಬಹುದೆಂಬ ಭರವಸೆ ಉಂಟಾಗಿದೆ.

## ಕಾರ್ಯನೀತಿ ರೂಪಿಸಲು ಸಹಾಯಕವಾಗಬಹುದಾದ ಅಂಶಗಳು

ಈ ಅಧ್ಯಯನವು ಭಾರತದಲ್ಲಿನ ಗ್ರಾಮೀಣ ಕೃಷಿಯೇತರ ಉದ್ದಿಮೆಗಳ ಅನೇಕ ಕುತೂಹಲಕಾರಿ ಅಂಶಗಳನ್ನು ಹೊರಗೆಡವಿದೆ. ಅಧ್ಯಯನದ ಫಲಿತಾಂಶಗಳ ಅನುಸಾರ ಕೆಳಕಂಡ ಸಲಹೆಗಳನ್ನು ಕಾರ್ಯನೀತಿಯಲ್ಲಿ ಸುಧಾರಣೆಯನ್ನು ತರಲು ನೀಡಲಾಗಿದೆ:

- ಕಡಿಮೆ ಸಾಗುವಳಿ ಭೂಮಿಯನ್ನು ಹೊಂದಿರುವ ರೈತರು ಆಧುನಿಕ ತಂತ್ರಜ್ಞಾನದಿಂದ ಕೂಡಿದ ಕೃಷಿಯನ್ನು ಅಳವಡಿಸಿಕೊಂಡರೂ ಸಹ ಅವರ ಆದಾಯವು ಗಣನೀಯ ಪ್ರಮಾಣದಲ್ಲಿ ಹೆಚ್ಚಲು ಸಾಧ್ಯವಿಲ್ಲ. ಆದ್ದರಿಂದ, ಈ ಅಧ್ಯಯನದ ಫಲಿತಾಂಶಗಳ ಮೂಲಕ ಕಂಡುಬಂದಿರುವಂತೆ ಅವರುಗಳು ಕೃಷಿಯೇತರ ವಲಯದ ಉದ್ದಿಮೆಗಳನ್ನು ಅಭಿವೃದ್ಧಿ ಪಡಿಸಿಕೊಂಡು ತಮ್ಮ ಆದಾಯವನ್ನು ಸಾಕಷ್ಟು ಹೆಚ್ಚಿನ ಪ್ರಮಾಣದಲ್ಲಿಯೇ ಹೆಚ್ಚಿಸಿಕೊಳ್ಳಬಹುದಾಗಿದೆ. ಅಧ್ಯಯನದಡಿಯಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಕೃಷಿಯೇತರ ಉದ್ದಿಮೆಯಿಂದ ಆದಾಯವನ್ನು ಪಡೆಯುತ್ತಿರುವ ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಗಳು ತಿಂಗಳಿಗೆ ಅಂದಾಜು ರೂ.೨೮೯೫/- ಗಳನ್ನು ಪಡೆಯುತ್ತಿವೆ.

- ಹೆಚ್ಚಿನ ಕೃಷಿ ಉತ್ಪನ್ನ ದೊರಕದೆ ಇರುವ ಸಂದರ್ಭಗಳಲ್ಲಿ ತಮ್ಮ ಕುಟುಂಬಗಳನ್ನು ಸಂರಕ್ಷಿಸಿಕೊಳ್ಳುವ ಸಲುವಾಗಿ ಸಣ್ಣ ಮತ್ತು ಅತಿಸಣ್ಣ ರೈತರು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗುತ್ತಾರೆ ಎಂದು ಅಧ್ಯಯನದಿಂದ ತಿಳಿದುಬಂದಿದೆ. ದೊಡ್ಡ ರೈತರಿಗೆ ಈ ಸಮಸ್ಯೆ ಇಲ್ಲದಿರುವುದರಿಂದ ಅವರುಗಳು ಕೃಷಿ ಉದ್ದಿಮೆಯಲ್ಲೇ ತೊಡಗಿರುತ್ತಾರೆ. ಸಣ್ಣ ಮತ್ತು ಅತಿಸಣ್ಣ ರೈತರು ತೊಡಗಿಕೊಳ್ಳುವ ಕೃಷಿಯೇತರ ಚಟುವಟಿಕೆಗಳು ಅರ್ಥಪೂರ್ಣವಾಗಿ ಅಭಿವೃದ್ಧಿ ಹೊಂದಿ ಸುಸ್ಥಿರವಾಗಿ ಮುಂದುವರೆಯುವ ಸಲುವಾಗಿ ಅವರುಗಳಿಗೆ ಹೆಚ್ಚಿನ ಬೆಂಬಲ ಕೊಡುವ ಅಗತ್ಯತೆಯಿದೆ.

- ಕೃಷಿಯಿಂದ ಬರುವ ಆದಾಯವು ಬಹಳ ಅನಿಶ್ಚಿತತೆಯಿಂದ ಕೂಡಿರುವುದರಿಂದ, ರೈತರ ಆದಾಯವು ಸುಸ್ಥಿರವಾಗಲು ಕೃಷಿಯೇತರ ಚಟುವಟಿಕೆಗಳಿಂದ ಬರುವ ಆದಾಯ ಅಗತ್ಯವಾಗಿದೆ. ಆದ್ದರಿಂದ ಕೃಷಿಯೇತರ ವಲಯವನ್ನು ಅಭಿವೃದ್ಧಿ ಪಡಿಸಲು ರೂಪಿತವಾಗುವ ಯಾವುದೇ ಕಾರ್ಯನೀತಿಯು ಕೃಷಿ ವಲಯದ ಅಭಿವೃದ್ಧಿಯನ್ನೂ ಜೊತೆಜೊತೆಯಲ್ಲಿಯೇ ಮಾಡುವಂತಹದ್ದಾಗಬೇಕು.

- ಗ್ರಾಮೀಣ ಕೃಷಿಯೇತರ ವಲಯವನ್ನು ಅಭಿವೃದ್ಧಿ ಪಡಿಸಲು ಉತ್ಪಾದನಾ ಮತ್ತು ಬಳಕೆ ಸಂಪರ್ಕಗಳೆರಡೂ ಸಹ ಬಹು ಮುಖ್ಯವೆಂದು ಈ ಅಧ್ಯಯನವು ಕಂಡುಹಿಡಿದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಅಭಿವೃದ್ಧಿ ಮತ್ತು ಕೃಷಿಯೇತರ ಅಭಿವೃದ್ಧಿಗಳೆರಡೂ ಜೊತೆಯಲ್ಲೇ ಸಾಗಬೇಕೆಂಬುದನ್ನು ಇದು ಶ್ರುತಪಡಿಸುತ್ತದೆ. ಇದೂ ಅಲ್ಲದೆ, ಕೃಷಿ ಉತ್ಪನ್ನಗಳು ಮತ್ತು ಕೃಷಿಯೇತರ ವಲಯದ ಉತ್ಪನ್ನಗಳು – ಇವೆರಡೂ ಸಹ ಲಾಭದಾಯಕ ಬೆಲೆಗಳನ್ನು ಪಡೆಯಬೇಕಾದ ಅಗತ್ಯತೆಯಿದೆ. ರೈತರು ಉತ್ತಮ ಬೆಲೆಗಳನ್ನು ಪಡೆಯಲು ಒಪ್ಪಂದ ಕೃಷಿಯು ಒಂದು ಆಯ್ಕೆಯಾಗಿದೆ. ಈ ಆಯ್ಕೆ ಮಾಡಿದರೆ, ಒಂದು ವಲಯದ ಹೆಚ್ಚಳವನ್ನು ಇನ್ನೊಂದು ವಲಯದ ಬಂಡವಾಳ ಹೂಡಿಕೆಯ ಅಗತ್ಯತೆಯನ್ನು ಪೂರೈಸಲು ದಾರಿಯಾಗುತ್ತದೆ. ಇದೂ ಅಲ್ಲದೆ, ಬಳಕೆದಾರರ

ಸಂಪರ್ಕವನ್ನು ಸುಲಭವಾಗಿ ಸಾಧಿಸಿಕೊಳ್ಳುವ ಸಲುವಾಗಿ ಕೃಷಿಯೇತರ ವಲಯವು ಅಂತಹದ್ದು ಸಾಧ್ಯವಾಗುವ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳಬೇಕು. ಉತ್ಪಾದನೆಯು ನಿರಂತರವಾಗಿ ಸಾಗಬೇಕೆಂದರೆ ಮಾರಾಟಕ್ಕೆ ಉತ್ತಮ ಸಾಧ್ಯತೆಗಳಿರಲೇಬೇಕಾಗುತ್ತದೆ.

- ಕಾಲಾನುಕ್ರಮದಲ್ಲಿ ಕೃಷಿಯೇತರ ವಲಯದಲ್ಲಿನ ಉದ್ಯೋಗಾವಕಾಶಗಳು ಹೆಚ್ಚುತ್ತಾ ಬಂದಿರುವುದನ್ನು ಅಧ್ಯಯನವು ಬೆಳಕಿಗೆ ತಂದಿದ್ದರೂ ಸಹ, ಶೇ.೯೦ ಕ್ಕೂ ಹೆಚ್ಚಿನ ಈ ಉದ್ದಿಮೆಗಳು ಸ್ವಂತ ಲೆಕ್ಕವಹಿವಾಟುಗಳನ್ನು ಹೊಂದಿವೆಯೆಂಬುದನ್ನೂ ಕಂಡುಹಿಡಿದಿದೆ. ಅಂದರೆ ಅವು ಕಾರ್ಮಿಕರನ್ನು ನೇಮಿಸಿಕೊಳ್ಳುವುದಿಲ್ಲ. ಹೆಚ್ಚಿನ ಈ ಉದ್ದಿಮೆಗಳು ಮನೆಯಲ್ಲೇ ತೊಡಗಿಕೊಳ್ಳುವ ಸಣ್ಣ ಉದ್ದಿಮೆಗಳಾಗಿವೆ ಮತ್ತು ಹೆಚ್ಚಿನ ಆದಾಯವನ್ನೇನೂ ಗಳಿಸುವುದಿಲ್ಲ. ಹೀಗಾಗಿ, ಗ್ರಾಮೀಣ ವಲಯಕ್ಕೆ ಸೂಕ್ತವಾದಂತಹ ಕಾರ್ಯಕ್ರಮಗಳನ್ನು ರೂಪಿಸಿ, ಆಯಾ ಕಾರ್ಯಕ್ರಮಗಳಿಗೆ ಅಗತ್ಯವಾದ ತಿಳುವಳಿಕೆ ಮತ್ತು ಕೌಶಲ್ಯಾಭಿವೃದ್ಧಿಯನ್ನು ಮಾಡುವುದು ಅಗತ್ಯವಾಗಿದೆ. ಹೀಗೆ ಮಾಡುವುದರಿಂದ ಗ್ರಾಮೀಣ ಜನರು ಕೃಷಿಯೇತರ ವಲಯದಲ್ಲಿನ ಹೆಚ್ಚು ಅರ್ಥಪೂರ್ಣ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

- ಈ ಗ್ರಾಮೀಣ ಕೃಷಿಯೇತರ ಉದ್ದಿಮೆಗಳಲ್ಲಿ ಕೇವಲ ಐದನೆಯ ಒಂದು ಭಾಗದಷ್ಟು ಉದ್ದಿಮೆಗಳು ಮಾತ್ರ ತಯಾರಿಕಾ ಕ್ಷೇತ್ರದಲ್ಲಿದ್ದು, ಉಳಿದೆಲ್ಲವೂ ಹೆಚ್ಚೂ ಕಡಿಮೆ ಪೆಟ್ಟಿಗೆ ಅಂಗಡಿ ವ್ಯಾಪಾರದಂತಹ ಸಣ್ಣಪುಟ್ಟ ಚಟುವಟಿಕೆಗಳೇ ಆಗಿವೆ. ತಯಾರಿಕಾ ಉದ್ದಿಮೆಗಳು ಪ್ರತಿಯೊಂದು ರೂಪಾಯಿಯ ಬಂಡವಾಳ ಹೂಡಿಕೆಗೂ ತಕ್ಕಂತೆ ಹೆಚ್ಚಿನ ಉದ್ಯೋಗ ಸೃಷ್ಟಿ ಮಾಡುತ್ತದೆಯೆಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಆದ್ದರಿಂದ, ಸರ್ಕಾರವು ಗ್ರಾಮೀಣ ಪ್ರದೇಶಗಳ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡೇ ತಯಾರಿಕಾ ಕಾರ್ಯವನ್ನು ಮಾಡುವ ಕೈಗಾರಿಕೆಗಳನ್ನು ಗ್ರಾಮಗಳಲ್ಲಿ ಅಭಿವೃದ್ಧಿ ಪಡಿಸುವ ಯೋಜನೆಗಳನ್ನು ರೂಪಿಸಬೇಕಾಗಿದೆ. ಈ ದಿಸೆಯಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಕಾರ್ಯನಿರ್ವಹಿಸುವ ಆಹಾರ ಸಂಸ್ಕರಣಾ ಘಟಕಗಳನ್ನೂ ಮತ್ತು ಪಶುಸಂಗೋಪನಾ ಉತ್ಪನ್ನಗಳನ್ನು ತಯಾರಿಸುವ ಘಟಕಗಳನ್ನೂ ಸ್ಥಾಪಿಸುವ ಬಗ್ಗೆ ಯೋಜನೆಯನ್ನು ಕಾರ್ಯಗತಗೊಳಿಸುವುದು ಒಂದು ಉತ್ತಮ ಆಯ್ಕೆಯಾಗುತ್ತದೆ.

- ಅಧ್ಯಯನದಿಂದ ಕಂಡು ಬಂದಿರುವ ಪ್ರಕಾರ ಈ ಗ್ರಾಮೀಣ ಕೃಷಿಯೇತರ ಉದ್ದಿಮೆಗಳ ಪೈಕಿ ಶೇ ೧೩ ರಷ್ಟನ್ನು ಮಾತ್ರ ಆಧುನಿಕ ಉದ್ದಿಮೆಗಳೆಂದು ಹೆಸರಿಸಬಹುದಾಗಿದೆ. ಉಳಿದೆಲ್ಲವೂ ಕಡಿಮೆ ಮೌಲ್ಯವನ್ನು ಹೊಂದಿರುವ ಸಾಂಪ್ರದಾಯಿಕ ಉದ್ದಿಮೆಗಳಾಗಿವೆ. ಈ ದೃಷ್ಯಾವಳಿಯನ್ನು ಬದಲಾಯಿಸುವ ಸಲುವಾಗಿ ತರಬೇತಿಯು ಅವಶ್ಯಕವಾಗಿದೆ ಮತ್ತು ಮಾರುಕಟ್ಟೆ ಬೆಂಬಲವನ್ನೊದಗಿಸಬೇಕಾಗಿದೆ.

  ಅಧ್ಯಯನದ ಫಲಿತಾಂಶಗಳ ಪ್ರಕಾರ, ಒಟ್ಟಾರೆ ಗ್ರಾಮೀಣ ಕೃಷಿಯೇತರ ಉದ್ದಿಮೆಗಳ ಪೈಕಿ ಶೇ ೭೦ ರಷ್ಟು ಪೂರ್ಣವಾಗಿ ನಿಶ್ಚೇತನಗೊಂಡಿವೆ ಅಥವಾ ಸಂಕುಚಿತಗೊಂಡಿವೆ ಅಥವಾ ನಿಷ್ಕ್ರಿಯವಾಗಿವೆ. ಹೂಡಿಕೆ ಮಾಡಲು ಹಣದ ಕೊರತೆ, ಹೊಸ ಉತ್ಪಾದನಾ ಸಾಧ್ಯತೆಗಳ ಬಗ್ಗೆ ಸಾಕಷ್ಟು ತಿಳುವಳಿಕೆ ಇಲ್ಲದಿರುವುದು, ಮಾರುಕಟ್ಟೆ ಸೌಲಭ್ಯಗಳ ಬಗ್ಗೆ ತಿಳುವಳಿಕೆ ಇಲ್ಲದಿರುವುದು ಇತ್ಯಾದಿಗಳು ಇದಕ್ಕೆ ಮುಖ್ಯ ಕಾರಣಗಳಾಗಿವೆ. ಔಪಚಾರಿಕ ಹಣಕಾಸು ವಲಯವು ಈ ಸಮಸ್ಯೆಯನ್ನು ಪರಿಹರಿಸಲು ಮುಂದೆ ಬಂದು, ಗ್ರಾಮೀಣ ಕೃಷಿಯೇತರ ವಲಯದ ಉದ್ದಿಮೆದಾರರಿಗೆ ಹಣಕಾಸಿನ ಸಹಾಯ ಮಾಡಬೇಕಲ್ಲದೆ, ಉದ್ದಿಮೆಗಳನ್ನು ಸಚೇತನಗೊಳಿಸಿಕೊಳ್ಳಲು ಅಗತ್ಯವಾದ ತರಬೇತಿಯನ್ನೂ ನೀಡಬೇಕಾಗಿದೆ.

- ಕೃಷಿಯೇತರ ಉದ್ಯಮಶೀಲತೆಯನ್ನು ಅಭಿವೃದ್ಧಿ ಪಡಿಸಲು ಇರುವ ಒಂದು ಪ್ರಧಾನ ಸಮಸ್ಯೆ ಸಂಪನ್ಮೂಲಗಳ ಕೊರತೆಯೇ ಆಗಿದೆ. ಈ ಸನ್ನಿವೇಶದಲ್ಲಿ ಸಾಲ ನೀಡುವಿಕೆಯು ಒಂದು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಭಾರತದ ಗ್ರಾಮೀಣ ಕೃಷಿಯೇತರ ಉದ್ದಿಮೆಗಳು ಉದ್ದಿಮೆಯ ಉಳಿವಿಗಾಗಿ ಸಾಲ ಸೌಲಭ್ಯ ಪಡೆಯುವಲ್ಲಿ ತೀರಾ ಹಿಂದೆ ಬಿದ್ದಿದ್ದು, ಕೇವಲ ಶೇ ೦.೧ ರಷ್ಟು ಕುಟುಂಬಗಳು ಮಾತ್ರ ಔಪಚಾರಿಕ ಹಣಕಾಸು ಮೂಲಗಳಿಂದ ಸಾಲ ಸೌಲಭ್ಯವನ್ನು ಪಡೆದಿವೆ. ಈ ಸಾಲ ಸೌಲಭ್ಯವು ಕೃಷಿಯೇತರ ಉದ್ದಿಮೆಗಾಗಿನ ಸ್ಥಿರ ಬಂಡವಾಳಕ್ಕಾಗಿ ಮತ್ತು ಸಾಲಗಳ ನಿರ್ವಹಣೆಗಾಗಿರುತ್ತದೆ. ಸಣ್ಣ ಮತ್ತು ಅತಿಸಣ್ಣ ರೈತರಿಗೆ ಸಿಗುವ ಸಾಲಸೌಲಭ್ಯವೂ ಸಹ ಅವರ ಆದಾಯವನ್ನು ಗಣನೀಯವಾಗಿ ಹೆಚ್ಚಿಸಲು (ಆರ್‌ಎನ್‌ಎಫ್‌ಎಸ್ ಭವಿಷ್ಯವನ್ನು ಸುಧಾರಿಸುವ ಮೂಲಕ) ನೆರವಾಗುತ್ತದೆ (ಪ್ರತಿಗಾಮಿ ವಿಶ್ಲೇಷಣೆಯ ಆಧಾರದ ಮೇರೆಗೆ ಅಧ್ಯಯನದಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ). ಆದ್ದರಿಂದ, ಈ ವಲಯಕ್ಕೆ ಧನಸಹಾಯ ಒದಗಿಸುವುದು ಆದ್ಯತಾ ಗುರಿಗಳ ಒಂದು ಭಾಗವಾಗಬೇಕು. ಸಾಲ ಸೌಲಭ್ಯಗಳನ್ನು ನೀಡಲು ಈಗ ಚಾಲ್ತಿಯಲ್ಲಿರುವ ಅದೇ ಉದ್ದೇಶದ ಮುದ್ರಾ ಯೋಜನೆಯನ್ನು ಉಪಯೋಗಿಸಿಕೊಂಡು ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ನೆರವನ್ನು ನೀಡಬಹುದಾಗಿದೆ. ಸಾಲ ಸೌಲಭ್ಯದ ಗುಣಮಟ್ಟವನ್ನು ಕಾಪಾಡಿಕೊಳ್ಳುವ ಸಲುವಾಗಿ ಸಾಲ ತೆಗೆದುಕೊಳ್ಳುವವರ ಸಾಲದ ಇತಿಹಾಸವನ್ನು ನಿರ್ವಹಿಸಬಹುದಾಗಿದೆ ಮತ್ತು ಸಮಯಕ್ಕೆ ಸರಿಯಾಗಿ ಸಾಲವನ್ನು ತೀರಿಸುವ ಇತಿಹಾಸ ಹೊಂದಿರುವವರಿಗೆ ಸಾಲದ ಮಿತಿಯನ್ನು ಹೆಚ್ಚಿಸಲೂಬಹುದಾಗಿದೆ.

- ಸಾಲ ಸೌಲಭ್ಯ ಸಿಗುವಿಕೆಯು ಆರ್ಥಿಕ ಸಾಕ್ಷರತೆಯ ಮೇಲೂ ಸಹ ಅವಲಂಬಿತವಾಗುತ್ತದೆ. ಅಸ್ಸಾಂ ನಂತಹ ರಾಜ್ಯಗಳಲ್ಲಿ ರೈತರ ಆರ್ಥಿಕ ಸಾಕ್ಷರತೆಯು ಸಾಕಷ್ಟು ಕಡಿಮೆಯಿದೆಯೆಂದು ಅಧ್ಯಯನದಿಂದ ಕಂಡು ಬಂದಿದೆ. ಆರ್ಥಿಕ ಸೇರ್ಪಡೆ ಅಂದೋಲನದ ಅಂಗವಾಗಿ ಬ್ಯಾಕುಗಳಲ್ಲಿ ಖಾತೆಗಳನ್ನು ತೆರೆಯಲಾಗಿದ್ದರೂ ಸಹ, ಬಹುಪಾಲು ಗ್ರಾಮೀಣ ಜನತೆಯು ಈ ಖಾತೆಗಳನ್ನು ಅಡಿಗೆ ಅನಿಲ ಸಹಾಯಧನವನ್ನು ಪಡೆಯುವುದಕ್ಕೆ ಮಾತ್ರ ಉಪಯೋಗಿಸುತ್ತಿದೆ. ಆದಾಯ ಹೆಚ್ಚಿಸುವ ಅವಕಾಶಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಈ ಪ್ರದೇಶಗಳಲ್ಲಿ ಆರ್ಥಿಕ ಸಾಕ್ಷರತಾ ಆಂದೋಲನಗಳು ಅವಶ್ಯಕವಾಗಿವೆ.

- ಆದಾಯ ಹೆಚ್ಚಿಸುವ ಚಟುವಟಿಕೆಗಳನ್ನು ಕೈಗೊಳ್ಳಲು ಹಾಗೂ ಈ ಚಟುವಟಿಕೆಗಳಿಗೆ ಸಾಲ ಸೌಲಭ್ಯಗಳನ್ನು ಪಡೆಯಲು ಸ್ವಯಂ ಸೇವಾ ಗುಂಪುಗಳು (ಎಸ್‌ಹೆಚ್‌ಜಿ) ಅಥವಾ ಜಂಟಿ ಹೊಣೆಗಾರಿಕೆ ಗುಂಪುಗಳನ್ನು (ಜೆಎಲ್‌ಜಿ) ರಚಿಸಿಕೊಳ್ಳುವುದು ಬಹಳಷ್ಟು ಉಪಯುಕ್ತವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಮಹಿಳಾ ಸದಸ್ಯರನ್ನೊಳಗೊಂಡ ಎಸ್‌ಹೆಚ್‌ಜಿಗಳು ಸರ್ವೇ ಸಾಮಾನ್ಯವಾಗಿದ್ದರೂ ಸಹ, ಅಸ್ಸಾಂನಂತಹ ಇತರ ರಾಜ್ಯಗಳಲ್ಲಿ ಈ ರೀತಿಯ ಗುಂಪುಗಳನ್ನು ದೊಡ್ಡ ಪ್ರಮಾಣದಲ್ಲಿ ರಚಿಸಿಕೊಳ್ಳಬೇಕಾಗಿದೆ. ಬಹುತೇಕ ರಾಜ್ಯಗಳಲ್ಲಿ ಪುರುಷ ಸದಸ್ಯರನ್ನು ಒಳಗೊಂಡಂತಹ ಜೆಎಲ್‌ಜಿಗಳು ಇನ್ನೂ ಅಭಿವೃದ್ಧಿ ಹೊಂದಬೇಕಾಗಿದೆ.

- ಗ್ರಾಮೀಣ ಕೃಷಿಯೇತರ ಚಟುವಟಿಕೆಗಳ ಪೈಕಿ ನಿರ್ಮಾಣ ಕಾರ್ಯವು ಅತಿ ಹೆಚ್ಚಿನ ಉದ್ಯೋಗವನ್ನು ಒದಗಿಸುತ್ತದೆ. ಆದರೆ ಈ ಚಟುವಟಿಕೆಯು ಸರ್ವೇಸಾಮಾನ್ಯವಾಗಿ ಗ್ರಾಮೀಣ ಆರ್ಥಿಕ ಚಕ್ರದೊಡನೆ ತಳುಕು ಹಾಕಿಕೊಂಡಿರುತ್ತದೆ. ಇದು ಆರ್‌ಎನ್‌ಎಫ್ ಆದಾಯದ ಏರುಪೇರು ಹಾಗೂ ವ್ಯತ್ಯಾಸಗಳಿಗೆ ಕಾರಣವಾಗುತ್ತದೆ. ಇದನ್ನು ತಪ್ಪಿಸಲು ವೈವಿಧ್ಯಮಯ ನಿರ್ಮಾಣ ಚಟುವಟಿಕೆಗಳಲ್ಲಿ ಸುಧಾರಣೆ ತರುವುದು ಉತ್ತಮ. ಗ್ರಾಮೀಣ ಕೃಷಿಯೇತರ ಚಟುವಟಿಕೆಗಳಲ್ಲಿ ಶೇ.೨೦ ರಷ್ಟು ಪಾಲನ್ನು ಹೊಂದಿರುವ ನಿರ್ಮಾಣ ಕಾರ್ಯಗಳಲ್ಲಿ ಸುಧಾರಣೆ ತರುವ ಸಲುವಾಗಿ ಕಾರ್ಯನೀತಿಗಳನ್ನು ರೂಪಿಸಿ, ಆ ಮೂಲಕ ಸಹಾಯಧನದಿಂದೊಡಗೂಡಿದ ಸುಧಾರಿತ ಸಾಲ ಸೌಲಭ್ಯಗಳನ್ನು ಈ ಚಟುವಟಿಕೆಗೆ ನೀಡುವುದು ಹಾಗೂ ತೆರಿಗೆ ವಿರಾಮಗಳನ್ನು ನೀಡುವುದು ನಿರ್ಮಾಣ ಕಾರ್ಯಕ್ಕೆ ಉತ್ತೇಜನ ನೀಡಿದಂತಾಗುತ್ತದೆ.

- ಕೃಷಿಯೇತರ ವ್ಯಾಪಾರ ವಹಿವಾಟುಗಳನ್ನು ಪ್ರಾರಂಭಿಸಲು ಹಾಗೂ ನಿರ್ವಹಿಸಲು ಅಗತ್ಯವಾದ ತಾಂತ್ರಿಕತೆ ಹಾಗೂ ತಿಳುವಳಿಕೆಗಳು ಭಾರತದಾದ್ಯಂತ ಇರುವ ಗ್ರಾಮೀಣ ಜನರಲ್ಲಿ ಇಲ್ಲವೆಂದೇ ಹೇಳಬಹುದಾಗಿದೆ. ಈ ಕೊರತೆಯನ್ನು ನೀಗಿಸಲು ಸಹಕಾರಿ ಬ್ಯಾಂಕುಗಳನ್ನು ಬಳಸಿಕೊಳ್ಳಬಹುದಾಗಿದೆ. ಈ ಬ್ಯಾಂಕುಗಳಿಂದ ಈ ಹಿಂದೆ ಯಶಸ್ಸನ್ನು ಕಂಡಿದ್ದ ವ್ಯಾಪಾರ ವಹಿವಾಟುಗಳ ಪಟ್ಟಿಯನ್ನು ತಯಾರಿಸಿಟ್ಟುಕೊಂಡು, ವ್ಯಾಪಾರವಹಿವಾಟುಗಳನ್ನು ಪ್ರಾರಂಭಿಸಲು ಉತ್ಸುಕರಾಗಿರುವ ಆಕಾಂಕ್ಷಿಗಳಿಗೆ ನೀಡಬಹುದಾಗಿದೆ. ಅಲ್ಪಾವಧಿ ಸಾಲವನ್ನು ನೀಡುವ ಸಹಕಾರ ಸಂಘಗಳಿಗೆ ಪುನಶ್ಚೇತನ ನೀಡುವ ಸಲುವಾಗಿ ಡಾ. ವೈದ್ಯನಾಥನ್ ಸಮಿತಿಯು ತಯಾರಿಸಿ ಸಲ್ಲಿಸಿರುವ ವರದಿಯಲ್ಲಿ ವ್ಯಾಪಾರವಹಿವಾಟು ಚಟುವಟಿಕೆಗಳ ಅಭಿವೃದ್ಧಿಯಲ್ಲಿ ಸಹಕಾರಿ ಬ್ಯಾಂಕುಗಳು ಹೆಚ್ಚಿನ ಪಾತ್ರ ವಹಿಸಬೇಕೆಂದು ಒತ್ತಾಯಿಸಲಾಗಿದೆ ಮತ್ತು ಈ ಸಲಹೆಯು ಪ್ರಸ್ತುತ ಸಂದರ್ಭಕ್ಕೂ ಅನ್ವಯವಾಗುತ್ತದೆ.

ಒಟ್ಟಾರೆ ನೋಡಿದಾಗ, ಭಾರತದಲ್ಲಿ ಕೃಷಿಯೇತರ ವಲಯವು ತನ್ನ ಪೂರ್ಣ ಸಾಮರ್ಥ್ಯದೊಂದಿಗೆ ಇನ್ನೂ ಬೆಳೆದಿಲ್ಲವೆಂಬುದು ವ್ಯಕ್ತವಾಗುತ್ತದೆ. ಗ್ರಾಮೀಣ ಕೃಷಿಯೇತರ ವಲಯಗಳನ್ನು ರೈತರಿಗೆ ಪರ್ಯಾಯ ಆದಾಯ ಒದಗಿಸುವ ಒಂದು ಅವಕಾಶವಾಗಿ ಬೆಳೆಸಲು ಆ ವಲಯಗಳಿಗೆ ಸೂಕ್ತ ಬೆಂಬಲವನ್ನು ನೀಡುವ ಮೂಲಕವಾಗಿಯೂ ಮತ್ತು ಗ್ರಾಮೀಣ ಜನರಿಗೆ ಈ ವಲಯಗಳ ಬಗ್ಗೆ ತಿಳುವಳಿಕೆಯನ್ನು ನೀಡುವ ಮೂಲಕವೂ ಮಾತ್ರ ಸಾಧ್ಯವಿದೆ. ಇದು ಸಾಧ್ಯವಾದಾಗ ರೈತರ ಆದಾಯವನ್ನು ದ್ವಿಗುಣಗೊಳಿಸುವ ಗುರಿಯನ್ನು ಸಾಧಿಸಬಹುದಾಗಿದೆ.

**ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ,**

ಡಾ.ವಿಕೆಆರ್‌ವಿ ರಾವ್ ರಸ್ತೆ, ನಾಗರಬಾವಿ ಪೋಸ್ಟ್, ಬೆಂಗಳೂರು ೫೬೦ ೦೭೨.

ದೂರವಾಣಿ: ೨೩೨೧೫೪೬೮, ೨೩೨೧೫೫೧೯, ಫ್ಯಾಕ್ಸ್: +೯೧-೮೦-೨೩೨೧೭೦೦೮; ವೆಬ್: ಹೆಚ್‌ಟಿಟಿಪಿ:// ಡಬ್ಲ್ಯುಡಬ್ಲ್ಯುಡಬ್ಲ್ಯು.ಐಸೆಕ್.ಎಸ್.ಐಎನ್.